# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

E.mail-dir.deptofphyedn@gmail.com
Ph. No. 0821-2419288


ಸಂ : ದೈ.ಶಿ.ವಿ./842/ಅಂ.ಕಾ.ಅಂ.ವ.ಪು.ಕ್ರೀ.ಕೂ./2017-2018

ದಿನಾಂಕ : 08ನೇ ಫೆಬ್ರವರಿ 2018

ಗೆ,

ಪ್ರಾಂಶುಪಾಲರುಗಳು
ಮೈಸೂರು ವಿಶ್ವವಿದ್ಯಾನಿಲಯದ
ಸಂಯೋಜಿತ ಮತ್ತು ನಿಯೋಜಕ ಕಾಲೇಜುಗಳು

ಮಾನ್ಯರೆ,

ವಿಷಯ : 2017-2018ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ ಪುರುಷರ ಕ್ರೀಡಾ ಕೂಟ ಗ್ರೂಪ್- 1 ಕ್ರೀಡೆಗಳನ್ನು ಪದವೀಧರರ ಚುನಾವಣೆಯ ಪ್ರಯುಕ್ತ ಒಂದು ದಿನ ಮುಂದೂಡಿರುವ ಬಗ್ಗೆ.

* * * * *

ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ ಪುರುಷರ ಕ್ರೀಡಾ ಕೂಟ **ಗ್ರೂಪ್- 1 ಕ್ರೀಡೆಗಳು ಪದವೀಧರರ ಚುನಾವಣೆಯ ಪ್ರಯುಕ್ತ ದಿನಾಂಕ : 21 ಹಾಗೂ 22 ಫೆಬ್ರವರಿ 2018ರ ಬದಲು ಒಂದು ದಿನ ಮುಂದೂಡಿ ದಿನಾಂಕ 22-02-2018 ಮತ್ತು 23-02-2018 ರಂದು ಪಿ.ಇ.ಎಸ್. ಪ್ರಥಮ ದರ್ಜೆ ಕಾಲೇಜು ಮಂಡ್ಯ** ಇವರ ಆಶ್ರಯದಲ್ಲಿ ನಡೆಸಲಾಗುವುದು. ಚಾಮುಂಡಿ/ಚಾಮರಾಜ/ಮಾಂಡವ್ಯ/ಮಲೆನಾಡು/ಕೃಷ್ಣರಾಜ ವಲಯಗಳ ಪಂದ್ಯಾವಳಗಳಲ್ಲಿ **ಕಬಡ್ಡಿ, ಬ್ಯಾಡ್‌ಮಿಂಟನ್ (ಷಟಲ್) ಹ್ಯಾಂಡ್‌ಬಾಲ್, ಬ್ಯಾಸ್ಕೆಟ್‌ಬಾಲ್, ಕ್ರಿಕೆಟ್ ಹಾಕಿ ಮತ್ತು ವಾಲಿಬಾಲ್** ಕ್ರೀಡಾ ಸ್ಪರ್ಧೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಎಲ್ಲಾ ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಲು ಅರ್ಹತೆ ಗಳಸಿದ್ದು, ಅರ್ಹತೆ ಗಳಸಿದ ಕಾಲೇಜುಗಳ ತಂಡಗಳ ವ್ಯವಸ್ಥಾಪಕರುಗಳ ಸಭೆಯನ್ನು ದಿನಾಂಕ 22ನೇ ಫೆಬ್ರವರಿ 2018 ರಂದು ಬೆಳಗ್ಗೆ 10-00ಕ್ಕೆ **ಪಿ.ಇ.ಎಸ್. ಪ್ರಥಮ ದರ್ಜೆ ಕಾಲೇಜು, ಮಂಡ್ಯ** ಇಲ್ಲಿ ಕರೆಯಲಾಗಿದೆ.

ಅರ್ಹತೆ ಗಳಸಿದ ನಿಮ್ಮ ಕಾಲೇಜಿನ ವಿವಿಧ ತಂಡಗಳು ದಿನಾಂಕ 22ನೇ ಫೆಬ್ರವರಿ 2018ರಂದು ಬೆಳಗ್ಗೆ 8-30ಕ್ಕೆ ತಮ್ಮ ಕಾಲೇಜುಗಳ ಸಮವಸ್ತ್ರ ಧರಿಸಿ ಮತ್ತು ಕಾಲೇಜುಗಳ ಧ್ವಜದೊಂದಿಗೆ **ಪಿ.ಇ.ಎಸ್. ಪ್ರಥಮ ದರ್ಜೆ ಕಾಲೇಜು, ಮಂಡ್ಯ**ದಲ್ಲಿರುವ ಫುಟ್‌ಬಾಲ್ ಆಟದ ಮೈದಾನದಲ್ಲಿ ನಡೆಯಲಿರುವ ಉದ್ಘಾಟನಾ ಸಮಾರಂಭದಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಲು ನಿರ್ದೇಶನ ನೀಡಬೇಕಾಗಿ ವಿನಂತಿ.

ಹೊರಗಡೆಯಿಂದ ಬರುವ ಕಾಲೇಜುಗಳ ತಂಡಗಳಿಗೆ 21ನೇ ಫೆಬ್ರವರಿ 2018ರ ಮಧ್ಯಾಹ್ನ 3-00 ಘಂಟೆಯಿಂದ **ಪಿ.ಇ.ಎಸ್. ಪ್ರಥಮ ದರ್ಜೆ ಕಾಲೇಜು, ಮಂಡ್ಯ**ದಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲಾಗುವುದು. **ತಂಡಗಳಿಗೆ ವಸತಿ ಸೌಕರ್ಯ ನೀಡಲು ತಂಡಗಳ ಜೊತೆಯಲ್ಲಿ ವ್ಯವಸ್ಥಾಪಕರು ಕಡ್ಡಾಯವಾಗಿರಬೇಕು ಹಾಗೂ ವಿದ್ಯಾರ್ಥಿಗಳ ಜೊತೆಯಲ್ಲೇ ವಸತಿ ಸೌಕರ್ಯವನ್ನು ತಂಡದ ವ್ಯವಸ್ಥಾಪಕರಿಗೂ ಕಲ್ಪಿಸಿರುವುದರಿಂದ ತಂಡದ ಜೊತೆಯಲ್ಲೇ ಕಡ್ಡಾಯವಾಗಿರಬೇಕು.** ವಸತಿ ಸೌಕರ್ಯ ಪಡೆಯಲು ರೂ. 500-00 (ಐದುನೂರು ರೂಪಾಯಿಗಳು) ಎಚ್ಚರಿಕೆ ಹಣವನ್ನು ವಸತಿ ವ್ಯವಸ್ಥೆಯ ಅಧಿಕಾರಿಯವರಲ್ಲಿ ಸಂದಾಯ ಮಾಡಬೇಕು. ಸದರಿ ಹಣವನ್ನು ಪಂಧ್ಯಾವಳ ಮುಗಿದ ನಂತರ ವಾಸ್ತವ್ಯದ ಸ್ಥಳದಲ್ಲಿ ಯಾವುದೇ ಹಾನಿ ಮಾಡದಿದ್ದಲ್ಲಿ ಹಿಂದಿರುಗಿಸಲಾಗುವುದು.

**ಕ್ರೀಡಾಕೂಟದಲ್ಲಿ ಭಾಗವಹಿಸುವ ವಿವಿಧ ಕಾಲೇಜಿನ ಕ್ರೀಡಾ ತಂಡಗಳು ಕ್ರೀಡೆ ನಡೆಯುವ ಸಮಯದಲ್ಲಿ ಹಾಗೂ ವಸತಿ ಸೌಕರ್ಯ ಒದಗಿಸಿರುವ ಜಾಗದಲ್ಲಿ ಶಿಸ್ತು ಸಂಯಮ ಹಾಗೂ ಸಮಯ ಪಾಲನೆಗೆ ಹೆಚ್ಚು ಮಹತ್ವವನ್ನು ನೀಡಲು ಆಯೋಜಕರು ತೀರ್ಮಾನಸಿದ್ದು, ಇದನ್ನು ಉಲ್ಲಂಘಿಸಿದ ಕ್ರೀಡಾ ತಂಡಗಳನ್ನು ಕ್ರೀಡಾಕೂಟದಿಂದ ಹಾಗೂ ವಸತಿ ನಿಲಯದಿಂದ ಹೊರ ಹಾಕಲಾಗುವುದು. ಆದುರಿಂದ ಕ್ರೀಡಾಕೂಟದಲ್ಲಿ ಭಾಗವಹಿಸುವ ಕಾಲೇಜಿನ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ಕ್ರೀಡಾಪಟುಗಳಿಗೆ ಕ್ರೀಡಾಕೂಟದ ಸಮಯದಲ್ಲಿ ಶಿಸ್ತಿನಿಂದ ವರ್ತಿಸಲು ಆದೇಶಿಸಬೇಕಾಗಿ ಕೋರಿಕೆ. ಯಾವುದೇ ತಂಡ ಅಶಿಸ್ತಿನಿಂದ ವರ್ತಿಸಿದರೆ ಆ ತಂಡದ ವ್ಯವಸ್ಥಾಪಕರು/ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕಾಲೇಜಿನ ಪ್ರಾಂಶುಪಾಲರು ಹೊಣೆಯಾಗಿರುತ್ತಾರೆ. ಮೇಲಿನ ಅಂಶವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲು ಕೋರಲಾಗಿದೆ.**

ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ಆಟಗಾರರು ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ ನಿಗದಿಪಡಿಸಿರುವ ನಮೂನೆಯಲ್ಲಿ ಇತ್ತೀಚಿನ ಭಾವಚಿತ್ರದ ಮೇಲೆ ಪ್ರಾಂಶುಪಾಲರುಗಳ ಸಹಿ ಮತ್ತು ಮೊಹರು ಇರುವ "ಗುರುತಿನ **ಚೀಟಿ**"ಯನ್ನು ಕಡ್ಡಾಯವಾಗಿ ಹೊಂದಿರಬೇಕು, ಇಲ್ಲದಿದ್ದಲ್ಲಿ ಆಟಗಾರರಿಗೆ ಪಂದ್ಯಗಳಲ್ಲಿ ಭಾಗವಹಿಸಲು ಬಿಡುವುದಿಲ್ಲ.

ಮೇಲಿನ ಸೂಚನೆಗಳನ್ನು ಮತ್ತು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಕ್ರೀಡಾ ಕಾರ್ಯನೀತಿಯ ಕೈಪಿಡಿಯಲ್ಲಿ (Sports Policy Handbookನಲ್ಲಿ) ತಿಳಿಸಿರುವ ನಿಯಮಗಳನ್ನು ತಮ್ಮ ಕಾಲೇಜಿನ ತಂಡಗಳ ವ್ಯವಸ್ಥಾಪಕರು ಹಾಗೂ ಆಟಗಾರರು ಪಾಲಿಸುವಂತೆ ತಿಳಿಸಬೇಕಾಗಿ ಕೋರುತ್ತಾ ಈ ಕ್ರೀಡಾಕೂಟದ ಯಶಸ್ಸಿಗೆ ತಮ್ಮ ಸಂಪೂರ್ಣ ಸಹಕಾರ ನೀಡಬೇಕಾಗಿ ವಿನಂತಿ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ

8/2/2018

(ಡಾ. ಪಿ. ಕೃಷ್ಣಯ್ಯ)
ನಿರ್ದೇಶಕರು

**ವಿಶೇಷ ಸೂಚನೆ : ಗ್ರೂಪ್ 1 ಕ್ರೀಡೆಗಳು : ಕ್ರಿಕೆಟ್ : ತಂಡದವರು ದಿನಾಂಕ : 19-02-2018 ರಂದು ಬೆಳಗ್ಗೆ 8-00 ಘಂಟೆಗೆ ಪಿ.ಇ.ಎಸ್. ಪ್ರಥಮ ದರ್ಜೆ ಕಾಲೇಜು, ಮಂಡ್ಯದಲ್ಲಿ ವರದಿಮಾಡಿಕೊಳ್ಳಲು ಸೂಚಿಸಿದೆ.**

ಪ್ರತಿಗಳನ್ನು ವಂದನಾಪೂರ್ವಕವಾಗಿ :

ಚಾಮುಂಡಿ/ಚಾಮರಾಜ/ಮಾಂಡವ್ಯ/ಮಲೆನಾಡು/ಕೃಷ್ಣರಾಜ ವಲಯಗಳ ಸಂಚಾಲಕರುಗಳ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.